(ಇಂದು ದಿನಾಂಕಃ **06-08-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು -ಆರೋಪಿ ಪರ ಶ್ರೀ ಎಸ್.ಎಂ.ಎಸ್. ವಕೀಲರಿಂದ**

ನಿಪಿ.13 ಕ್ಕೆ ಸಂಬಂಧಿಸಿಂದಂತೆ ಯಾವುದೇ ಪ್ರಮಾಣ ಪತ್ರವನ್ನು ಸಲ್ಲಿಸಲಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲಾತಿಯು ನಮ್ಮ ಫಿರ್ಯಾದಿ ಸಂಸ್ಥೆಯ ದಾಖಲಾತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.13 ಕ್ಕೆ ಸಂಬಂಧಿಸಿದಂತೆ Banker of Evidence Act ನ ಅನ್ವಯ ಪ್ರಮಾಣ ಪತ್ರವನ್ನು ಸಲ್ಲಿಸಲಿಲ್ಲ ಎಂದರೆ ಸರಿ. ಈ ಪ್ರಮಾಣ ಪತ್ರವನ್ನು ಸಲ್ಲುವುದು ಅತೀ ಅವಶ್ಯಕ ಎಂದರೆ ಸಾಕ್ಷಿಯು ನಾವು ಯಾವುದೇ ಪ್ರಕರಣದಲ್ಲಿ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ.13 ರಲ್ಲಿ ಸದರಿ ದಾಖಲಾತಿಯನ್ನು ಯಾವ ದಿನಾಂಕದಂದು ಪ್ರಿಂಟ ಔಟ ಮಾಡಿದ್ದೇವೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ.

ಸಾಲ ನೀಡಿದ ಹಣವನ್ನು ಆರೋಪಿತನ ಉಳಿತಾಯ ಖಾತೆಗೆ ಜಮಾ ಮಾಡಿರುತ್ತೇವೆ. ಆರೊಪಿತನ ಸಾಲದ ಖಾತೆಯು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಇದೆಯಾ ಎಂದರೆ ಸಾಕ್ಷಿಯು ನಿಪಿ.13 ಆರೋಪಿತನ ಸಾಲ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿತನ ಉಳಿತಾಯ ಖಾತೆಯು ಕೂಡ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಇತ್ತು. ಆರೊಪಿತನ ಸಾಲದ ಹಣವನ್ನು ಆತನ ಉಳಿತಾಯ ಖಾತೆಗೆ ಜಮಾ ಮಾಡಿದ ಬಗ್ಗೆ ನಿಪಿ.13 ರಲ್ಲಿ ನಮೂದು ಇರುತ್ತದೆ. ಆರೊಪಿತನ ಎಸಿ.ಬಿ. ಖಾತೆ 2956 ಕ್ಕೆ ಜಮಾ ಆದ ಬಗ್ಗೆ ನಮೂದು ಇದೆ. ಸದರಿ ನಂ. ನ ಮುಂದೆ ಎಸ್.ಬಿ.ಐ ಎಂದರೆ savings bank information ಆಗಿರುತ್ತದೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

**ಸಿ.ಸಿ.ನಂ.:**2347-2024

ಪಿ.ಡಬ್ಲ್ಯೂ:1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ